ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014-15 : ಮೇ 21, 2015

## ಪತ್ರಿಕಾ ಪ್ರಕಟಣೆ

## ನಗರಕ್ಕೆ ಉಪರಾಷ್ಟ್ರಪತಿ ಆಗಮನ

ಬೆಂಗಳೂರು, ಮೇ 21 (ಕರ್ನಾಟಕ ವಾರ್ತೆ)

ಭಾರತದ ಉಪ ರಾಷ್ಟ್ರಪತಿ ಶ್ರೀ ಎಂ. ಹಮೀದ್ ಅನ್ಸಾರಿ ಅವರು ಪತ್ನಿ ಸಮೇತ ಇಂದು ಭಾರತೀಯ ವಾಯುಪಡೆ ವಿಮಾನದಲ್ಲಿ ನಗರದ ಹೆಚ್.ಎ.ಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲ ಶ್ರೀ ವಾಜುಭಾಯಿ ರೂಡಭಾಯಿ ವಾಲ, ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಉಪ ರಾಷ್ಟ್ರಪತಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಅವರು ನಾಳೆ ದಿನಾಂಕ 22-5-2015 ರಂದು ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿರುವ 15 ನೇ ಅಖಿಲ ಭಾರತ ಪೀಪಲ್ಸ್ ಸೈನ್ಸ್ ಕಾಂಗ್ರೆಸ್ ನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.
ಪಲ್ಲವಿ/ಕೆಎಂ

## ನರ್ಸಿಂಗ್ ಶಾಲೆಗೆ ಅರ್ಜಿ ಆಹ್ವಾನ

ಬೆಂಗಳೂರು, ಮೇ 21 (ಕರ್ನಾಟಕ ವಾರ್ತೆ)

2015–16 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸ್‌ಗೆ ಸರ್ಕಾರಿ ಮತ್ತು ಖಾಸಗಿ ಶುಶ್ರೂಷಾ ಶಾಲೆಗಳಲ್ಲಿನ ಶೇಕಡಾ 10 ರಷ್ಟು ಸರ್ಕಾರಿ ಕೋಟಾದ ಸೀಟುಗಳಿಗೆ ದ್ವಿತೀಯ ಪಿಯುಸಿಯ ಶೇಕಡಾ 40% ರಷ್ಟು ಅಂಕ ಪಡೆದು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಕನಿಷ್ಠ ಶೇಕಡ 35% ರಷ್ಟು ಅಂಕ ಪಡೆದಿರಬೇಕು) ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ದಿನಾಂಕ 20–5–2015 ರಿಂದ 30–6–2015 ರವರೆಗೆ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪಡೆಯಬಹುದು. www.ksdneb.org & www.ksdneb.net ಅರ್ಜಿ ಶುಲ್ಕ ರೂ. 250/– (ಪಜಾ/ಪ.ಪಂಗಡ,

ಪ್ರವರ್ಗ -1 ಕ್ಕೆ ರೂ. 125/-)ಗಳನ್ನು ನಿಗದಿಗೊಳಿಸಿದ್ದು, ಅರ್ಜಿ ಶುಲ್ಕವನ್ನು **Med.Supt. & Deputy Chairmain, KSDNEB, Bangalore** ಇವರ ಹೆಸರಿನಲ್ಲಿ ಡಿ.ಡಿ. ಪಡೆದು ಅರ್ಜಿಯೊಂದಿಗೆ ಸಲ್ಲಿಸುವಂತೆ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರು ತಿಳಿಸಿದ್ದಾರೆ.
ಪಲ್ಲವಿ/ಕೆಎಂ

## ಗ್ರಾ. ಪಂ. ಚುನಾವಣೆ:
## ಮತದಾನ ದಿನದಂದು ರಜೆ ಘೋಷಿಸಲು ಸೂಚನೆ

ಬೆಂಗಳೂರು, ಮೇ 21 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿನ 30 ಜಿಲ್ಲೆಗಳ 5844 ಗ್ರಾಮ ಪಂಚಾಯತಿಗಳಿಗೆ ಚುನಾವಣೆಯನ್ನು ಘೋಷಿಸಿದ್ದು, ದಿನಾಂಕ: 29-5-2015 ಮತ್ತು 2-6-2015 ರಂದು ಎರಡು ಹಂತಗಳಲ್ಲಿ ಮತದನಾನ ನಡೆಯಲಿದೆ. ಸದರಿ ಮತ ಕ್ಷೇತ್ರಗಳ ವ್ಯಾಪ್ತಿಯಲ್ಲಿನ ಕಾರ್ಖಾನೆಗಳ ಕಾಯ್ದೆ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಆಯಾ ಚುನಾವಣಾ ದಿನಾಂಕಗಳಂದು ಮತ ಚಲಾಯಸಲು ಅನುಕೂಲವಾಗುವಂತೆ ಅವರಿಗೆ ವೇತನ ಸಹಿತ ರಜೆ ಅಥವಾ ನಿರಂತರ ಕಾರ್ಯಾಚರಣೆಯುಳ್ಳ ಕಾರ್ಖಾನೆಗಳಲ್ಲಿ ಕಾರ್ಮಿಕರು ಹಕ್ಕು ಚಲಾಯಿಸಲು ಸಾಧ್ಯವಾಗುವಂತೆ ಕನಿಷ್ಠ 2 ಗಂಟೆಗಳ ಕಾಲ ಅನುಮತಿಯನ್ನು ನೀಡಲು ಚುನಾವಣಾ ಆಯೋಗ ಆದೇಶಿಸಿರುವ ಹಿನ್ನೆಲೆಯಲ್ಲಿ ಎಲ್ಲಾ ಆಡಳಿತ ವರ್ಗದವರು ಅದನ್ನು ತಪ್ಪದೇ ಪಾಲಸಿ ಕೆಲಸಗಾಗರರಿಗೆ ಮತ ಚಲಾಯಿಸಲು ಅನುವು ಮಾಡಿಕೊಡುವಂತೆ ನಿರ್ದೇಶಕರು, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು ಇವರು ಮನವಿ ಮಾಡಿದ್ದಾರೆ.

ಪಲ್ಲವಿ/ಕೆಎಂ

## ಡಿಪ್ಲೋಮ ಪ್ರವೇಶ

ಬೆಂಗಳೂರು, ಮೇ 21 (ಕರ್ನಾಟಕ ವಾರ್ತೆ)

2015-16 ನೇ ಸಾಲಿಗೆ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೊಮ ಪ್ರವೇಶಾತಿಯನ್ನು ಬಯಸುವ ಅಭ್ಯರ್ಥಿಗಳು ಸರ್ಕಾರಿ ನಿಗಧಿಪಡಿಸಿರುವ ಅರ್ಜಿಗಳ ಶುಲ್ಕ **GM/2A/2B/3A/3B** ರೂ. 100/- ಮತ್ತು **SC/ST/CAT-1 = 50/-** ನ್ನು ಕರ್ನಾಟಕ ರಾಜ್ಯದ ಯಾವುದೇ ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು ಶಾಖೆಗಳಲ್ಲಿ **ED-KEA-DCET-2015** ಎಂಬ ಹೆಸರಿನ ಉಳಿತಾಯ ಖಾತೆ ಸಂಖ್ಯೆ **SB A/C 64097386381 IFS CODE :SBMY0040017,** ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್‌ನ ಯಾವುದೇ ಬ್ರಾಂಚ್‌ನಲ್ಲಿ ಖಾತೆ ಸಂಖ್ಯೆ **SB A/C 62417732180, ED-KEA-DCET-2015** ಎಂಬ ಹೆಸರಿನಲ್ಲಿ ಹಣವನ್ನು ಪಾವತಿ ಮಾಡಿ ಚಲನ್‌ನ್ನು ಪಡೆದು ಸಮೀಪದ "ದಾಖಲೆ ಪರಿಶೀಲನೆ ಹಾಗೂ ಆನ್‌ಲೈನ್ ಅರ್ಜಿ ಸಲ್ಲಿಕೆ/ಆಪ್ಷನ್ ಎಂಟ್ರಿ ಸಹಾಯ ಕೇಂದ್ರ

(**Document Verification Cum on Line Application Submission Centre/Option Entry Help Centres)** ನಲ್ಲಿ ಸಲ್ಲಿಸಿ ಅರ್ಜಿ ಮತ್ತು ಮಾಹಿತಿ ಪುಸ್ತಕವನ್ನು ಪಡೆದುಕೊಳ್ಳಬಹುದು.

ಸೂಚನೆ: ವಿದ್ಯಾರ್ಥಿಗಳು ಪಾವತಿ ಮಾಡಿರುವ ಚಲನ್ (**Counterfoil**) ನ ಒಂದು ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಳ್ಳುವಂತೆ ಸೂಚಿಸಿದೆ.

ಪಲ್ಲವಿ/ಕೆಎಂ